**ಓ ಎಸ್ ನಂಃ 325-14**
**ಡಿ ಡಬ್ಲ್ಯೂ ಃ 2**

**ದಿಃ 19.03.2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಆರ್.ಸಿ.ಕೆ ವಕೀಲರಿಂದ**

27. ಈರಮ್ಮ ಬರೆದುಕೊಟ್ಟ ವಿಲ್ ಆಧಾರದಲ್ಲಿ ವಾದಿ ಖಾತಾ ಮಾಡಿಕೊಡಿ ಎಂದು ತಹಶೀಲ್ದಾರಿಗೆ ಕೋರಿಕೊಂಡರು ಅಂದರೆ ಸರಿ. ಆ ಸಮಯದಲ್ಲಿ ನಾನು ತಕರಾರು ಸಲ್ಲಿಸಿದೆ ಅಂದರೆ ಸರಿ. ನಾನು 1996-97 ರಲ್ಲಿ ತಹಶೀಲ್ದಾರರಿಂದ ಖಾತಾ ಮಾಡಿಸಿಕೊಂಡಿದ್ದೇನೆಂದರೆ ಸರಿ. ವಾದಿಗೆ ಗೊತ್ತಿಲ್ಲದೇ ಆ ರೀತಿ ಖಾತಾ ಆಗಿರುವುದು ಅಂದರೆ ಸಾಕ್ಷಿ ಖಾತಾ ನನ್ನ ಹೆಸರಿಗೆ ಆಗಿದೆ ಎಂದು ನುಡಿಯುತ್ತಾರೆ. ವಾದಿ ರಿಟ್ ಪಿಟಿಷನ್ ನಂ 24560/97 ರಂತೆ ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ಆ ಖಾತೆ ವಿರುದ್ದ ಸಲ್ಲಿಸಿದ್ದರು ಅಂದರೆ ಸರಿ. ಆ ರಿಟ್ ಪಿಟಿಷನ್ ನಲ್ಲಿ ನಾನು ಕೂಡಾ ಎದುರುದಾರ ಅಂದರೆ ಸರಿ. ನಾನು ಆ ರಿಟ್ ಪಿಟಿಷನ್ ನಲ್ಲಿ ವಕೀಲರನ್ನು ನೇಮಿಸಿಕೊಂಡಿದ್ದೆ ಅಂದರೆ ಸರಿ. ಮಾನ್ಯ ಉಚ್ಛ ನ್ಯಾಯಾಲಯ ಆ ರಿಟ್ ಪಿಟಿಷನ್ ನಲ್ಲಿ ದಿಃ13.07.1991 ರಂದು ತಹಶೀಲ್ದಾರಿಗೆ ಮರು ಪರಿಶೀಲನೆ ಮಾಡಿ ಎಂದು ಆದೇಶ ಮಾಡಿ ಕಳುಹಿಸಿಕೊಟ್ಟರು ಅಂದರೆ ಸರಿ. ಆ ರೀತಿ ಆದೇಶ ಆದಾಗ ನನ್ನ ಹೆಸರಿಗೆ ಆದ ಖಾತೆಯನ್ನು ಮಾನ್ಯ ಉಚ್ಛ ನ್ಯಾಯಾಲಯ ರದ್ದುಪಡಿಸಿತು ಅಂದರೆ ಸರಿ. ಆರ್ ಆರ್ ಟಿ ಡಿಸ್ 1/2000-2001 ರಂತೆ ತಹಶೀಲ್ದಾರರು ಆ ಪ್ರಕರಣ ವಿಚಾರಣೆಗೆ ಕೈಗೆತ್ತುಕೊಂಡರು ಅಂದರೆ ಸರಿ. ಅದರಲ್ಲಿ ವಾದಿಯನ್ನು ಅರ್ಜಿದಾರರಾಗಿ ನನ್ನನ್ನು ಹಾಗೂ ಇತರರನ್ನು ಎದುರುದಾರರಾಗಿ ಮಾಡಿಕೊಂಡರು ಅಂದರೆ ಸರಿ. ಆ ಪ್ರಕರಣದಲ್ಲೂ ಕೂಡಾ ನಾನು ವಕೀಲರನ್ನು ನೇಮಿಸಿಕೊಂಡಿದ್ದೆ ಅಂದರೆ ಸರಿ. ದಿಃ17.03.2013 ರಂದು ಆ ಪ್ರಕರಣದಲ್ಲಿ ಎರಡು ಪ್ರತಿಯ ವಾದ ವಿವಾದಾಂಶಗಳನ್ನು ಆಲಿಸಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ತಹಶೀಲ್ದಾರರು ಆದೇಶ ಮಾಡಿದರು ಅಂದರೆ ಸರಿ.

28. ನಿಡಿ 13 ನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ನಿಡಿ 13 ರ ಪ್ಯಾರಾ 13 ರ 7 ನೇ ಲೈನ್ ನಲ್ಲಿ ಈ ಮೂರು ಜನರಲ್ಲಿ ಹಕ್ಕಿನ ಸ್ವಭಾವವನ್ನು ಗಮನಿಸಿದಾಗ ನಾಗಣ್ಣ ಬಿನ್ ಕೆಂಚಯ್ಯ ಖಾತೆದಾರರೆಂದು ಕಂಡು ಬಂದಿರುತ್ತೆ ಎಂದು ಓದಿ ಹೇಳಿರುತ್ತಾರೆ ಹಾಗೂ ನರಸಿಂಹೇಗೌಡರೇ ಖಾತೆದಾರರೆಂದು ಸಾಬೀತಾಗುವಂತೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಲು ವಿಫಲರಾಗಿರುತ್ತಾರೆಂದು ಹೇಳಿದ್ದಾರೆ ಎಂದು ಅದನ್ನು ಓದಿ ಹೇಳಿರುತ್ತಾರೆ. ಮೂಲ ಖಾತೆದಾರರ ಲೆಕ್ಕದಲ್ಲಿ ನಾಗಣ್ಣ ಬಿನ್ ಕೆಂಚಯ್ಯನವರು ಇದ್ದು ಅನುಭವದಾರರ ಕಲಂ ನಲ್ಲಿ ದಾಖಲಾಗಿರತಕ್ಕವರು ವಿಭಾಗ ಮಾಡಿಕೊಡಲು ಹೇಗೆ ಸಾಧ್ಯ ಹಾಗೂ ಒಂದು ವೇಳೆ ಪಾರಿಕತ್ ಮಾಡಿಕೊಂಡಿದ್ದರೂ ಸಹ 1938-39 ನೇ ಸಾಲಿನಲ್ಲಿ ಕಂದಾಯದ ಬಾಕಿಗಾಗಿ ಸರ್ಕಾರಿ ಪಡಾಕ್ಕೆ ಬಂದಿರುವುದರಿಂದ ಇದಕ್ಕಿಂತ

ಮುಂಚೆ ಇದ್ದ ದಾಖಲೆಗಳು ಶೂನ್ಯವಾಗಿರುತ್ತದೆ ಎಂಬುದಾಗಿ ಕೂಡಾ ಅದರಲ್ಲಿ ಹೇಳಿದ್ದಾರೆಂದರೆ ಸರಿ.

29. ಪ್ರತಿವಾದಿಗಳು ನಾಗಣ್ಣ ಬಿನ್ ಕೆಂಚಯ್ಯ ಮತ್ತು ಈರಮ್ಮ ಹಾಗೂ ಕಮಲಮ್ಮ ಇವರು ಹಕ್ಕುದಾರರಲ್ಲ ಎಂದು ವಿರೋಧಿಸಿದ್ದು ಈರಮ್ಮನವರು ಕ್ರಯಕ್ಕೆ ಕೊಟ್ಟಿರುವುದನ್ನು ಸಂಬಂಧಿಸಿರುತ್ತಾರೆ ಹಾಗೂ ಇದರಿಂದ ಪರೋಕ್ಷವಾಗಿ ನಾಗಣ್ಣ ಬಿನ್ ಕೆಂಚಯ್ಯ ಮೂಲ ಖಾತೆದಾರರೆಂದೆ ಒಪ್ಪಿಕೊಂಡಂತೆಯಾಗಿರುತ್ತದೆ ಎಂಬುದಾಗಿ ಅದರಲ್ಲಿ ಹೇಳಿದ್ದಾರೆಂದರೆ ಸರಿ. ಆ ರೀತಿ ತಹಶೀಲ್ದಾರರು ಹೇಳಿರುವುದು ಸರಿ ಇದೆ ಅಂದರೆ ಸರಿ. ಮೇಲ್ಕಂಡ ಎಲ್ಲಾ ಅಂಶಗಳಿಂದ ಸೋಲೂರು ಗ್ರಾಮದ ಸ.ನಂ.131/4 ರ 4 ಎಕರೆ 21 ಗುಂಟೆ ಹಾಗೂ ಸ.ನಂ.104 ರ 1 ಎಕರೆ 38 ಗುಂಟೆ ಜಮೀನಿಗೆ ನಿಜವಾದ ಮೂಲ ಖಾತೆದಾರರು ಪ್ರಿಲಿಮಿನರಿ ದಾಖಲೆ ಪ್ರಕಾರ ನಾಗಣ್ಣ ಬಿನ್ ಕೆಂಚಯ್ಯರವರೇ ಎಂದು ಭಾವಿಸಲಾಗಿದೆ ಎಂಬುದಾಗಿ ಕೂಡಾ ಅದರಲ್ಲಿ ಹೇಳಿದ್ದಾರೆಂದರೆ ಸರಿ. ಆ ರೀತಿ ಹೇಳಿರುವುದು ಕೂಡಾ ಸರಿ ಇದೆ ಅಂದರೆ ಸರಿ. ಆದ್ದರಿಂದ ತಹಶೀಲ್ದಾರರು ಸ.ನಂ.131/4 ರ 4 ಎಕರೆ 21 ಗುಂಟೆ ಹಾಗೂ 104 ರ 1 ಎಕರೆ 38 ಗುಂಟೆ ಜಮೀನು 1938-39 ರಲ್ಲಿ ಸರ್ಕಾರಿ ಪಡಾ ದಾಖಲಾಗಿರುವ ಜಮೀನಿಗೆ ಆರ್ ಆರ್ ಟಿ ಪಡಾ 6/1988-89 ದಿ:03.02.1994 ರಂದು ಮೂಲ ಖಾತೆದಾರರಾದ ಶ್ರೀ ನಾಗಣ್ಣ ಬಿನ್ ಕೆಂಚಯ್ಯರವರಿಗೆ ಪುನರ್ ಪ್ರಧಾನ ಮಾಡಿರುವುದು ಸರಿಯಾಗಿರುತ್ತದೆ ಎಂದು ಆದೇಶ ಮಾಡಿದ್ದಾರೆಂದರೆ ಸರಿ. ನಂತರ ಇವರ ವಂಶಸ್ಥರಾದ ಶ್ರೀಮತಿ. ಈರಮ್ಮ ಕೋಂ ಸಂಜೀವೇಗೌಡರ ಹೆಸರಿಗೆ ಬರುವುದು ನ್ಯಾಯ ಸಮ್ಮತವಾಗಿರುತ್ತದೆ ಹಾಗೂ ತದನಂತರ ಇವರು ತಮ್ಮ ಒಪ್ಪಿಗೆಯಂತೆ ಮಗಳಾದ ಶ್ರೀಮತಿ ಕಮಲಮ್ಮ ಕೋಂ ನರಸಿಂಹಯ್ಯನವರಿಗೆ ವಿಲ್ ಮಾಡಿರುವುದು ಸರಿಯಾಗಿರುತ್ತದೆ ಎಂದು ಇದರಂತೆ ಖಾತೆ ಬದಲಾಯಿಸಲು ಆದೇಶಿಸಿದೆ ಎಂಬುದಾಗಿ ಅದರಲ್ಲಿ ಹೇಳಿದ್ದಾರೆಂದರೆ ಸರಿ.

30. ದಿ:17.03.2003 ರಂದು ಮೇಲ್ಕಂಡಂತೆ ಮಾಡಿದ ಆದೇಶ ಸರಿಯಾಗಿದೆ ಅಂದರೆ ಸರಿ. ಸದರಿ ಆದೇಶದಂತೆ ವಾದಿ ಹೆಸರಿಗೆ ನಿಪಿ 5 ಮತ್ತು 6 ರಂತೆ ಖಾತೆ ಆಗಿದೆ ಅಂದರೆ ಸರಿ. ಸದರಿ ಖಾತೆಯಂತೆ 2010-2011 ನೇ ಸಾಲಿನ ತನಕ ವಾದಿ ಹೆಸರಿಗೆ ಖಾತೆ ಇತ್ತು ಅಂದರೆ ಸರಿ. ಸದರಿ ದಿ:17.03.2003 ರ ಆದೇಶವನ್ನು ನಾನು ರಾಮನಗರ ಎಸಿ ಮುಂದೆ ಪ್ರಶ್ನೆ ಮಾಡಿದ್ದೇನೆ. ಅದರ ಕೇಸು ನಂಬರ್ ನನಗೆ ಗೊತ್ತಿಲ್ಲ. ನನಗೆ ಕೇಸು ನಡೆಸಲು ಶಕ್ತಿ ಇಲ್ಲದೇ ಇದ್ದುದರಿಂದ ಹಾಗೂ ಆರೋಗ್ಯನೂ ಚೆನ್ನಾಗಿಲ್ಲದೇ ಇದ್ದುದರಿಂದ ಆ ಅಪೀಲ್ ನ್ನು ವಾಪಸ್ಸು ಪಡೆದುಕೊಂಡೆ. ನಿಪಿ 12 ಆ ಪ್ರಕರಣದ ಆರ್ಡರ್ ಶೀಟ್ ಹಾಗೂ ನಿಪಿ 13 ನಾನು ಹಿಂತೆಗೆದುಕೊಳ್ಳಲು ಸಲ್ಲಿಸಿದ ಮೆಮೋ ಅಂದರೆ ಸರಿ. ನಿಪಿ 13 ರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 13 ಬಿ ಎಂದು ಗುರುತಿಸಲಾಯಿತು. ಅದಕ್ಕೆ ನನ್ನ ವಕೀಲರು ಸಹಿ ಮಾಡಿದ್ದಾರೆಂದರೆ ಸರಿ. ಸಾಕ್ಷಿ ವಕೀಲರ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಅದನ್ನು ನಿಪಿ 13 ಸಿ ಎಂದು ಗುರುತಿಸಲಾಯಿತು. ಆ ರೀತಿ

ಮೆಮೋ ಸಲ್ಲಿಸಿದ್ದರೂ ಕೂಡಾ ಎಸಿ ಅವರು ಆ ಮೇಲ್ಮನವಿಯನ್ನು ನಿಡಿ 14 ರಲ್ಲಿ ಹೇಳಿರುವಂತೆ ಗುಣಾಂಶದ ಮೇಲೆ ತೀರ್ಮಾನ ಮಾಡಿದರು ಅಂದರೆ ಸರಿ. ನಾನು ಮೆಮೋ ಸಲ್ಲಿಸಿದ್ದರೂ ಕೂಡಾ ಉಳಿದ ಮೇಲ್ಮನವಿದಾರರು ಹಾಗೂ ಎದುರುದಾರರು ವಾದ ಮಂಡಿಸಿ ಗುಣಾಂಶದ ಮೇಲೆ ತೀರ್ಮಾನ ಆಯಿತು ಅಂದರೆ ಸರಿ.

**31.** ಅದರಲ್ಲಿ ವಿಲ್ ನ್ನು ಎಲ್ಲೂ ಪ್ರಶ್ನೆ ಮಾಡಿಲ್ಲ ಎಂಬ ವಿಚಾರವನ್ನು ಕೂಡಾ ಎಸಿ ಅವರು ಹೇಳಿದ್ದಾರೆಂದರೆ ಸರಿ. ಅದರಲ್ಲಿ ತಹಶೀಲ್ದಾರರು ಆರ್ ಆರ್ ಟಿ ಡಿಸ್ 1/2000-2001 ರಲ್ಲಿ ಮಾಡಿದ ಆದೇಶ ಕ್ರಮಬದ್ದವಾಗಿದೆ ಎಂದು ಹೇಳಿದ್ದಾರೆಂದರೆ ಸರಿ. ಅದೇ ರೀತಿ ನಮ ಹಕ್ಕಿಗೆ ದಕ್ಕೆ ಆಗಿದ್ದರೆ ಸಿವಿಲ್ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂಬುದನ್ನು ಕೂಡಾ ಅದರಲ್ಲಿ ಹೇಳಿದ್ದಾರೆಂದರೆ ಸರಿ. ನಿಡಿ 14 ರಲ್ಲಿ ಆಗಿರುವ ಆದೇಶದ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿಲ್ಲ ಅಂದರೆ ಸರಿ. 2003 ರಿಂದ 2010 ರ ತನಕ ವಾದಿಯೇ ದಾವಾ ಸ್ವತ್ತಿನ ಹಕ್ಕುದಾರರಾಗಿದ್ದರು ಅಂದರೆ ಸರಿ. ಅವರೇ ದಾವಾ ಸ್ವತ್ತಿನ ಸ್ವಾಧೀನದಲ್ಲಿದ್ದರು ಅಂದರೆ ಸಾಕ್ಷಿ ನಾವೇ ಇದ್ದೆವು ಎಂದು ನುಡಿಯುತ್ತಾರೆ. ವಾದಿಯೇ ಕಂದಾಯ ಪಾವತಿಸುತ್ತಿದ್ದಾರೆಂದರೆ ಸರಿ. ನಮಗೆ ಹಾಗೂ ನನ್ನ ದೊಡ್ಡಪ್ಪ ಚಿಕ್ಕಪ್ಪನಿಗೆ ದಾವಾ ಸ್ವತ್ತಿನಲ್ಲಿ ಹಕ್ಕು ಇಲ್ಲದೇ ಇದ್ದುದರಿಂದ ಮೇಲೆ ಹೇಳಿದ ತಹಶೀಲ್ದಾರರ ಆದೇಶ ಹಾಗೂ ಎಸಿ ರವರ ಆದೇಶವನ್ನು ಪ್ರಶ್ನೆ ಮಾಡಿಲ್ಲ ಅಂದರೆ ಸಾಕ್ಷಿ ನಾವು ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ.

**32.** ನಿಪಿ 7 ರಲ್ಲಿ ನಾಗಣ್ಣ ಬಿನ್ ಕೆಂಚಯ್ಯರವರ ಹೆಸರಿಗೆ ಖಾತೆ ಆಗಿದ್ದು, ನಂತರ ಈರಮ್ಮನವರ ಹೆಸರಿಗೆ ಖಾತೆ ಆಗಿದೆ ಅಂದರೆ ಸರಿ. ಅದರಲ್ಲಿ ನನ್ನ ಹೆಸರಿಗೂ ತದ ನಂತರ ಖಾತೆ ಆಗಿರುವುದು ನಮೂದು ಇದೆ ಅಂದರೆ ಸರಿ. ಮಾನ್ಯ ಉಚ್ಚ ನ್ಯಾಯಾಲಯದ ಆದೇಶ ಹಾಗೂ ತಹಶೀಲ್ದಾರರ ಆದೇಶದಂತೆ ನನ್ನ ಹೆಸರಿಗೆ ಇದ್ದ ಖಾತೆಯನ್ನು ವಜಾ ಮಾಡಿದರು ಅಂದರೆ ಸರಿ. ನಿಪಿ 7 ರಲ್ಲಿ ವ್ಯವಸಾಯಗಾರರ ಕಲಂ ನಲ್ಲಿ ಈರಮ್ಮ ರವರ ಹೆಸರು ಇದೆ ಅಂದರೆ ಸರಿ. ನಿಪಿ 16 ರ ಪ್ರಕಾರ ಖಾತೆದಾರರ ಹೆಸರು ದಾವಾ ಆಸ್ತಿ ಎರಡಕ್ಕೆ ಸಂಬಂಧಪಟ್ಟಂತೆ ನಾಗಣ್ಣ ಬಿನ್ ಕೆಂಚಯ್ಯರವರ ಹೆಸರೇ ಇದೆ ಅಂದರೆ ಸರಿ. ನಿಪಿ 20 ರ ಪ್ರಕಾರ ಖಾತೆದಾರರ ಹೆಸರು ದಾವಾ ಆಸ್ತಿಗಳಿಗೆ ಸಂಬಂಧಪಟ್ಟಂತೆ ನಾಗಣ್ಣ ಬಿನ್ ಕೆಂಚಯ್ಯರವರ ಹೆಸರೇ ಇದೆ ಅಂದರೆ ಸರಿ. ಆ ಎರಡೂ ದಾಖಲೆಗಳ ಪ್ರಕಾರ ನಾಗಣ್ಣ ಬಿನ್ ಕೆಂಚಯ್ಯರವರೇ ಮಾಲೀಕರು ಅಂದರೆ ಸರಿ. ನಿಪಿ 18 ಮತ್ತು 20 ರ ಪ್ರಕಾರ ಸ್ಥಳ ಪರಿಶೀಲನೆ ಮಾಡಿ ಜಿಲ್ಲಾಧಿಕಾರಿಗೆ ವರದಿ ಕೊಟ್ಟಿದ್ದಾರೆಂದರೆ ಸರಿ. ನಿಪಿ 18 ರ ವರದಿಯಲ್ಲಿ ನಾಗಣ್ಣ ಬಿನ್ ಕೆಂಚಯ್ಯರವರೇ ಮೂಲ ಖಾತೆದಾರರು ಎಂದು ಹೇಳಿದ್ದಾರೆಂದರೆ ಸರಿ. ಅದರಲ್ಲಿ 5 ನೇ ಪ್ಯಾರಾದಲ್ಲಿ ನರಸಿಂಹೇಗೌಡ ಬಿನ್ ನರಸಿಂಹೇಗೌಡರ ಹೆಸರಿಗೆ ಖಾತೆ ಆಗಿರುವ ಬಗ್ಗೆ ಮ್ಯುಟೇಷನ್ ದಾಖಲೆಯಲ್ಲಿ ಲಭ್ಯವಿರುವುದಿಲ್ಲ ಎಂದು ಹೇಳಿದ್ದಾರೆಂದರೆ ಸರಿ. 4 ನೇ ಪ್ಯಾರಾದಲ್ಲಿ ಶ್ರೀಮತಿ ಈರಮ್ಮನವರು ಸದರಿ ಮೂಲ ಖಾತೆದಾರರಾದ ನಾಗಣ್ಣನವರ ಮಗಳು ಹಾಗೂ ಸ್ವಾಧೀನ ಮತ್ತು ಅನುಭವದಾರರಾದ ನರಸಿಂಹೇಗೌಡ ಬಿನ್ ನರಸಿಂಹೇಗೌಡರ ಮೊಮ್ಮಗನ

ಹೆಂಡತಿಯಾಗಿರುತ್ತಾರೆಂದು ರಾಜಸ್ವ ನಿರೀಕ್ಷಕರ ವರದಿ ಹಾಗೂ ವಂಶ ವೃಕ್ಷದಂತೆ ವ್ಯಕ್ತಪಡುತ್ತದೆ ಎಂದು ಹೇಳಿದ್ದಾರೆಂದರೆ ಸರಿ.

**33.** ನಿಪಿ **20** ರಲ್ಲಿ ಉಲ್ಲೇಖ **1** ಮತ್ತು **2** ರಲ್ಲಿ ತಿಳಿಸಿರುವ ರೀತಿಯ ಸಂಬಂಧಪಟ್ಟ ಜಮೀನಿಗೆ ಸ್ಥಳ ತನಿಖೆ ಮಾಡಿ ರಾಜಸ್ವ ನಿರೀಕ್ಷಕರು ಮಾಡಿದ ವರದಿಯಲ್ಲಿ ಸದರಿ ಜಮೀನುಗಳ ಸ್ವಾಧೀನ ಮತ್ತು ಅನುಭವದಾರರು ಅರ್ಜಿದಾರರಾದ ಶ್ರೀಮತಿ ಈರಮ್ಮ ಕೋಂ ಲೇಟ್ ಸಂಜೀವೇಗೌಡ ಎಂದು ಬಾಜಿದಾರರ ಹೇಳಿಕೆ ಗ್ರಾಮಸ್ಥರ ಮಹಜರ್ ಹಾಗೂ ಅರ್ಜಿದಾರರ ಹೇಳಿಕೆಗಳಿಂದ ವ್ಯಕ್ತಪಟ್ಟಿರುತ್ತೆ ಎಂಬುದಾಗಿ ಹೇಳಿದ್ದಾರೆಂದರೆ ಸರಿ. ದಾವಾ **1** ನೇ ಸ್ವತ್ತಿನ ಉತ್ತರ ಭಾಗದಲ್ಲಿ **2** ಗುಂಟೆಯನ್ನು ರಾಷ್ಟ್ರೀಯ ಹೆದ್ದಾರಿಗೆ ರಸ್ತೆ ಅಗಲೀಕರಣಕ್ಕಾಗಿ ಸ್ವಾಧೀನ ಮಾಡಿಕೊಳ್ಳುತ್ತಾರೆಂದರೆ ಸರಿ. ಆ ಸಮಯದಲ್ಲಿ ನಿಪಿ **74** ರ ಪ್ರಕಾರ ಭೂ ಸ್ವಾಧೀನ ಅಧಿಕಾರಿ ಮೂಲ ಖಾತೆದಾರರಾದ ವಾದಿಗೆ ನೋಟೀಸ್ ನೀಡುತ್ತಾರೆಂದರೆ ಸರಿ. ಆ ನೋಟೀಸಿಗೆ ವಾದಿ ತಕರಾರು ಸಲ್ಲಿಸುತ್ತಾರೆಂದರೆ ನನಗೆ ಗೊತ್ತಿಲ್ಲ.

**34.** **2010** ರ ತನಕ ದಾವಾ ಸ್ವತ್ತಿನ ಬಗ್ಗೆ ನಾನು ಯಾವುದೇ ತಕರಾರು ಮಾಡಿಲ್ಲ ಅಂದರೆ ಸರಿ. **2010** ರಲ್ಲಿ ಏಕಾಏಕಿ ತಹಶೀಲ್ದಾರರ ಹತ್ತಿರ ಹೋಗಿ ಖಾತೆ ಮಾಡಿಸಿಕೊಂಡೆವು ಅಂದರೆ ಸರಿ. ದಿಃ**15.10.2010** ರಲ್ಲಿ ಆ ಆದೇಶ ಆಗಿರುವುದು ಅಂದರೆ ಸರಿ. ನಂತರ ಏಳು ದಿನಗಳಲ್ಲಿ ದಿಃ**22.10.2010** ರಂದು ದಾವಾ **1** ನೇ ಸ್ವತ್ತಿಗೆ ಸಂಬಂಧಪಟ್ಟಂತೆ ಮೃತ **4** ನೇ ಪ್ರತಿವಾದಿಗೆ ಸಾಂಕೇತಿಕವಾಗಿ ಕ್ರಯಪತ್ರ ಬರೆದುಕೊಟ್ಟೆವು ಅಂದರೆ ಸರಿ.

**ಈ ಹಂತದಲ್ಲಿ ಪಾಟೀ ಸವಾಲು ಮುಂದುವರೆಸಲು ಕಾಲವಕಾಶ ಕೋರಿದ್ದಾರೆ ನೀಡಲಾಗಿದೆ.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**